# ಆಚಾರ್ಯರ ಮನೆಗೆ ಮರುಜೀವ

■ ನಿರಂಜನ ವಾನಳ್ಳಿ

**ನಾಡು–ನುಡಿಗೆ ಅಪೂರ್ವ ಕೊಡುಗೆ ನೀಡಿದ ಪ್ರಾತಃಸ್ಮರಣೀಯರ ನೆನಪುಗಳನ್ನು ಉಳಿಸಿಕೊಳ್ಳುವ ಕೆಲಸ ನಮ್ಮಲ್ಲಿ ಆಗಿರುವುದು ಕಡಿಮೆ. ಸಾಧಕರು ಬಾಳಿದ ಮನೆಗಳು ವಾಣಿಜ್ಯ ಕಟ್ಟಡಗಳಾಗಿರುವ ಉದಾಹರಣೆಗಳು ಸಾಕಷ್ಟಿವೆ. ಹೀಗೆ ಸಾರ್ವಜನಿಕ ಅವಗಣನೆಗೊಳಗಾಗಿದ್ದ ಮೈಸೂರು ವಾಸುದೇವಾಚಾರ್ಯರು ಬಾಳಿದ ಮನೆ, ಈಗ ಕೊಳೆ ಕಳೆದುಕೊಂಡು ಮತ್ತೆ ಸಂಗೀತ ಸ್ವರಗಳಿಗೆ ಮೈಯೊಡ್ಡಿದೆ. ಚಾರಿತ್ರಿಕ ಮನೆಯ ಪುನರುಜ್ಜೀವನದ ಅನುಕರಣೀಯ ಸಾಹಸದ ಕಥನವಿದು.**



ವಾಗ್ಗೇಯಕಾರ ಮೈಸೂರು ವಾಸುದೇವಾಚಾರ್ಯ

ಕರ್ನಾಟಕದ ವಾಗ್ಗೇಯಕಾರರುಗಳಲ್ಲಿ ಮೊದಲಿಗೆ ನೆನಪಿಗೆ ಬರುವ ಹೆಸರೇ ಮೈಸೂರು ವಾಸುದೇವಾಚಾರ್ಯ ಅವರದು. ವಾಸುದೇವಾಚಾರ್ಯರು ಮೈಸೂರು ಅರಸು ಸಂಸ್ಥಾನದಲ್ಲಿ ರಾಜಕವಿಗಳು. ತೆಲುಗು, ಸಂಸ್ಕೃತಗಳಲ್ಲಿ ಅವರು ರಚಿಸಿದ ಹಾಡುಗಳು ಇಂದಿಗೂ ಕರ್ನಾಟಕ ಸಂಗೀತದ ಜನಪ್ರಿಯ ರಚನೆಗಳು. ಸಾಹಿತ್ಯ ರಚನೆಯೊಂದೇ ಅಲ್ಲ, ಹಾಡುವುದರಲ್ಲೂ ಅವರು ನಿಸ್ಸೀಮರಾಗಿದ್ದರು. ಅವರ ಸಂಸ್ಕೃತ ಜ್ಞಾನದ ಬಗ್ಗೆ ಪಂಡಿತರು ಹೇಳುವಂತೆ, 'ಕಾಳಿದಾಸನಲ್ಲಾದರೂ ವ್ಯಾಕರಣ ದೋಷಗಳನ್ನು ಹುಡುಕಬಹುದು. ಆದರೆ ವಾಸುದೇವಾಚಾರ್ಯರ ಸಂಸ್ಕೃತ ರಚನೆಗಳಲ್ಲಿ ತಪ್ಪು ಹುಡುಕಲಾಗದು' – ಆ ಮಟ್ಟಿನ ಪ್ರತಿಭಾವಂತರಾಗಿದ್ದವರು ಮೈಸೂರು ವಾಸುದೇವಾಚಾರ್ಯರು.

ಅವರು ವಾಸವಿದ್ದುದು ಮೈಸೂರಿನ ಅಗ್ರಹಾರದಲ್ಲಿ, ಅರಮನೆಗೆ ಸಮೀಪವೇ ಇರುವ ಸಯ್ಯಾಜಿರಾವ್ ರಸ್ತೆಯಲ್ಲಿ. ಅದೊಂದು ಆಗಿನ ಕಾಲದ ಹೆಂಚಿನ ಮನೆ. ವಾಸುದೇವಾಚಾರ್ಯರು ತಮ್ಮ ಹೆಚ್ಚಿನ ಜೀವಿತಾವಧಿಯನ್ನು ಕಳೆದುದು ಅದೇ ಮನೆಯಲ್ಲಿ. ಅವರ ಮನೆಯ ಮಂಗಲ ಕಾರ್ಯಗಳು, ಶ್ರಾದ್ಧಾದಿ ಕರ್ಮಗಳು, ದಿನನಿತ್ಯ ಸಂಗೀತ ಸಮಾರಾಧನೆಗಳು ಅಲ್ಲಿಯೇ ನಡೆಯುತಿದ್ದವು. ಮೈಸೂರಿಗೆ ಬರುವ ಸಂಗೀತಗಾರರಿಗಂತೂ ಆ ಮನೆ ಪುಣ್ಯಭೂಮಿ. ಲೆಕ್ಕವಿಲ್ಲದಷ್ಟು ಜನ ಅಲ್ಲಿ ಬಂದು ಹಾಡಿ ಆಚಾರ್ಯರ ಆಶೀರ್ವಾದ ಪಡೆದುಹೋಗಿದ್ದಾರೆ. ದಿನಾ ಸಂಜೆ ಮನೆಯ ಅಂಗಳದಲ್ಲಿ ಆಚಾರ್ಯರು ಅವರ ಸಮಕಾಲೀನ ಪಂಡಿತರ ಜೊತೆ ಕುಳಿತು ಚರ್ಚೆಮಾಡುತ್ತಿದ್ದರಂತೆ.



ಕಾರ್ತೀಕ ಮಾಸದಲ್ಲಿ ಬೆಳಗಿದ ವಾಸುದೇವಾಚಾರ್ಯರ ಮನೆ

ಅಂಥ ಆಚಾರ್ಯರ ಮನೆ ಕಾಲನ ಲೀಲೆಗೆ ಮಣಿದು ಇನ್ನೇನು ಬೀಳುವ ಸ್ಥಿತಿಯಲ್ಲಿತ್ತು. ಅದಕ್ಕಿಂತ ವಿಷಾದದ ಸಂಗತಿಯೆಂದರೆ, ವಾರಸುದಾರರಿಲ್ಲದೇ ಅನೈತಿಕ ಚಟುವಟಿಕೆಗಳ ಅಡ್ಡೆಯಾಗಿ ಅಲೆಮಾರಿಗಳ ಶೌಚದ ತಾಣವಾಗಿ, ಸನಿಹ ಸುಳಿಯುವವರು ಮೂಗುಮುಚ್ಚಿಕೊಂಡು ಸಾಗಬೇಕಾದ ಸ್ಥಿತಿಗೆ ಬಂದು ತಲುಪಿತ್ತು.